O.S. 5439/2012

PW4

ದಿನಾಂಕಃ **11.02.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ವೈ.ಎ.ಎನ್ ರವರಿಂದಃ

ದಿಃ**14.06.2007** ರಂದು ನನ್ನ ಅಣ್ಣ ವಾದಿ ಅಶೋಕ್ ಮತ್ತು ರಾಜೇಂದ್ರ ರವರ ನಡುವೆ ಮಾಡಿಕೊಂಡಿದ್ದರು ಎಂದು ಹೇಳಲಾದ ಪತ್ರ ನೊಂದಾವಣೆಗಾಗಿ ನಾನು ಕಛೇರಿಗೆ ಹೋದಾಗ ರೂ.**1,80,000/-** ಹಣವನ್ನು ವಾದಿ ನನಗೆ ಕೊಟ್ಟಿರುತ್ತಾರೆ. ದಿಃ**14.06.2007** ರಂದು ನಮ್ಮ ಕುಟುಂಬದ ಸ್ವತ್ತಿನ ವಿಭಾಗ ಮಾಡಿಕೊಳ್ಳುವ ಸಲುವಾಗಿ ನನ್ನ ಅಣ್ಣ ರಾಜೇಂದ್ರ ಮತ್ತು ವಾದಿ ಅಶೋಕ್ ರವರ ನಡುವೆ ಆದ ಪತ್ರ ನೊಂದಾವಣೆಗೆ ಹೋಗಿರುತ್ತೇವೆ. ಸದರಿ ದಿನದಂದು ಯಾವ ಪತ್ರ ನೊಂದಾವಣೆಗೊಂಡಿರುತ್ತದೆ ಎಂದರೆ ಸಾಕ್ಷಿಯು ನಮ್ಮ ಪಿತ್ರಾಜಿತ ಆಸ್ತಿಗೆ ಸಂಬಂಧಿಸಿದ ಪತ್ರವಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ದಿನದಂದು ನೊಂದಾವಣೆಗೊಂಡಿರುವ ಪತ್ರವನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ ಆದರೆ ಓದಿಸಿ ತಿಳಿದುಕೊಂಡಿರುತ್ತೇನೆ. ಸದರಿ ಪತ್ರವನ್ನು ನನಗೆ ಗೊತ್ತಿದ್ದವರಿಂದ ಓದಿ ತಿಳಿದುಕೊಂಡಿರುತ್ತೇನೆ. ಆದರೆ ಸದರಿಯವರ ಹೆಸರು ನನಗೆ ಗೊತ್ತಿಲ್ಲ. ಸದರಿ ನೊಂದಾವಣೆ ಪತ್ರದ ಕಾಪಿಯನ್ನು ತೆಗೆದುಕೊಂಡು ಹೋಗಿ ನನಗೆ ಗೊತ್ತಿದ್ದವರಿಂದ ಓದಿಸಿ ತಿಳಿದುಕೊಂಡಿರುತ್ತೇನೆ. ಸದರಿ ಪತ್ರ ಎಷ್ಟು ಸಂಪುಟವನ್ನು ಹೊಂದಿತ್ತು ಎಂದು ಈಗ ನನಗೆ ಹೇಳಲು ಆಗುವುದಿಲ್ಲ. ಸದರಿ ಪತ್ರ ಆಂಗ್ಲ ಮಾಧ್ಯಮದಲ್ಲಿ ಬರೆಯಲಾಗಿತ್ತು.

ಪ್ರಶ್ನೆಃ ವಾದಿಯು ನ್ಯಾಯಾಲಯದಲ್ಲಿ ನನ್ನನ್ನು ಸೇರಿದಂತೆ ನನ್ನ ಅಕ್ಕ ತಂಗಿಯರಿಗೆ ರೂ.**1,80,000/-** ಹಣ ಕೊಡುತ್ತೇನೆ ಎಂದು ವಾಗ್ದಾನದಂತೆ

ರೂ. **1** ಲಕ್ಷ ಮಾತ್ರ ಕೊಟ್ಟಿರುತ್ತೇನೆ ಎಂದು ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿದಿರುತ್ತಾರೆ ಮತ್ತು ಉಳಿಕೆ ಹಣವನ್ನು ನಾನು ಕೊಡಬೇಕು ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರವೇನು**?**

ಉಃ ಒಂದು ಲಕ್ಷ ಕೊಟ್ಟಿದ್ದರೂ ಉಳಿಕೆ ಹಣವನ್ನು ಆಗಿಂದಾಗ್ಯೆ ತೀರಿಸಿರುತ್ತಾರೆ. ರೂ.**1,80,000/-** ಹಣವನ್ನು ಎಂದೂ ಕೊಟ್ಟಿರುವುದಿಲ್ಲ ಆದರೂ ಈ ಬಗ್ಗೆ ನಾನು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ**16.07.2010** ರಂದು ನಮ್ಮ ಕುಟುಂಬದ ಸದಸ್ಯರ ನಡುವೆ ಒಂದು ವ್ಯವಸ್ಥಾ ಪತ್ರ ನಡೆದಿರುತ್ತದೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ ಎಂದರೆ ಸಾಕ್ಷಿಯು ವ್ಯವಸ್ಥಾ ಪತ್ರ ಎಂದರೆ ನನಗೆ ಗೊತ್ತಾಗುತ್ತಿಲ್ಲ ಎಂದು ಹೇಳುತ್ತಾರೆ. ವಾದಿ ಮತ್ತು ರಾಜೇಂದ್ರ ನಡುವೆ ದಿಃ**14.06.2007** ರ ಪತ್ರವನ್ನು ಹೊರತು ಪಡಿಸಿ ಬೇರೆ ಯಾವುದೇ ಪತ್ರ ವ್ಯವಹಾರ ನಡೆದಿರುವುದಿಲ್ಲ. ವಾದಿ ಅಶೋಕ್ ರವರು ಆಥಿರ್ಕವಾಗಿ ಸಬಲವಾಗಿಲ್ಲ ಎಂದರೆ ಸರಿಯಲ್ಲ. ವಾದಿಗೆ ನನ್ನನ್ನು ಸೇರಿ ನನ್ನ ಎಲ್ಲಾ ಸಹೋದರಿಯಾರಿಗೆ ರೂ.**1,80,000/-** ಹಣ ಕೊಡುವ ಆಥಿರ್ಕವಾಗಿ ಚೈತನ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ದಿಃ**14.06.2007** ರಂತೆ ನಡೆಯಿತು ಎನ್ನಲಾದ ವ್ಯವಸ್ಥಾ ಪತ್ರ ನಮ್ಮ ಕುಟಂಬದಲ್ಲಿ ಎಂದಿಗೂ ನಡೆದಿರಲಿಲ್ಲ ಆದರೂ ಸಹ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಸ್ವತ್ತಿನಲ್ಲಿ ಯಾವುದೇ ರೀತಿಯಾದ ಹಕ್ಕು ಇರುವುದಿಲ್ಲ ದರೆ ಪ್ರತಿವಾದಿಗಳೆ ವಾದಿಗೆ ಎಲ್ಲಿಯು ಮನೆ ಇರುವುದಿಲ್ಲ ಎಂದು ಹೇಳಿ ಒಂದು ಮನೆಯನ್ನು ವಾಸಕ್ಕಾಗಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿಗೆ

ಯಾವುದೇ ರೀತಿಯಾದ ಹಕ್ಕು ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ.ಸ.ಇದೆ.

**(ಓಂಕಾರಪ್ಪ. ಆರ್.)**
**5** ನೇ ಅ.ನ.ಸಿ.ಸಿ. ನ್ಯಾಯಾಧೀಶರು,
ಬೆಂಗಳೂರು ನಗರ.